# ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 631
2. ಸದಸ್ಯರ ಹೆಸರು : ಶ್ರೀ ಎಂ.ನಾರಾಯಣಸ್ವಾಮಿ
3. ಉತ್ತರಿಸುವ ದಿನಾಂಕ : 04.03.2021

| ಕ್ರ. ಸಂ. | ಪ್ರಶ್ನೆ | ಉತ್ತರಗಳು |
|---|---|---|
| (ಅ) | ತಮಿಳುನಾಡು ನಿಗದಿಗಿಂತ ಹೆಚ್ಚು ನೀರನ್ನು ಅಕ್ರಮವಾಗಿ ಬಳಸಿಕೊಂಡು ನದಿ ಜೋಡಣೆ ಯೋಜನೆಯನ್ನು ಪ್ರಾರಂಭ ಮಾಡಲು ಹೊರಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| (ಆ) | ಬಂದಿದ್ದಲ್ಲಿ, ಇದನ್ನು ತಕ್ಷಣ ನಿಲ್ಲಿಸಲು ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕಾನೂನು ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು) | ತಮಿಳುನಾಡು ರಾಜ್ಯವು ಕೇಂದ್ರ ಸರ್ಕಾರಕ್ಕೆ ಸದರಿ ಯೋಜನೆಗೆ ತಾತ್ವಿಕ ಅನುಮೋದನೆ ಹಾಗೂ ಆರ್ಥಿಕ ನೆರವು ಕೋರಿ ಬರೆದಿರುವ ದಿನಾಂಕ:05.01.2021ರ ಪತ್ರವು ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರದಿಂದ ರಾಜ್ಯದ ಅಭಿಪ್ರಾಯಕ್ಕಾಗಿ ಸ್ವೀಕೃತವಾಗಿದೆ.<br><br>ತಮಿಳುನಾಡಿನ ಕೈಗೊಳ್ಳುತ್ತಿರುವ ಕಾವೇರಿ-ದಕ್ಷಿಣ ವೆಲ್ಲಾರ್ ಯೋಜನೆಯ ಬಗ್ಗೆ ರಾಜ್ಯ ಸರ್ಕಾರದಿಂದ ಕೇಂದ್ರ ಜಲ ಸಂಪನ್ಮೂಲ ಸಚಿವಾಲಯ, ಕೇಂದ್ರ ಜಲ ಆಯೋಗ ಹಾಗೂ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರಕ್ಕೆ ಬರೆದಿರುವ ದಿನಾಂಕ:17.02.2021ರ ಪತ್ರಗಳಲ್ಲಿ ರಾಜ್ಯದ ಆಕ್ಷೇಪಣೆಯನ್ನು ತಿಳಿಸಲಾಗಿದೆ. ತಮಿಳುನಾಡಿನ ಸದರಿ ಯೋಜನೆಯು ಕಾನೂನು ಹಾಗೂ ಇತರೆ ಅಂಶಗಳಿಗೆ ವಿರುದ್ಧವಾಗಿದ್ದು, ಯಾವುದೇ ತೀರುವಳಿ ನೀಡದಂತೆ ಮತ್ತು ರಾಷ್ಟ್ರೀಯ ಯೋಜನೆಯೆಂದು ಘೋಷಿಸದಿರುವಂತೆ ಕೋರಲಾಗಿದೆ.<br><br>ಮಾನ್ಯ ಮುಖ್ಯಮಂತ್ರಿಗಳು ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ ಹಾಗೂ ಕೇಂದ್ರ ಜಲ ಶಕ್ತಿ ಸಚಿವರಿಗೆ ದಿನಾಂಕ:01.03.2021 ರಂದು ಬರೆದಿರುವ ಪತ್ರದಲ್ಲಿ ತಮಿಳುನಾಡು ರಾಜ್ಯವು ಕೈಗೊಂಡಿರುವ ಯೋಜನೆಯ ಬಗ್ಗೆ ರಾಜ್ಯದ ಆಕ್ಷೇಪಣೆಯನ್ನು ತಿಳಿಸಿ, ಸದರಿ ಯೋಜನೆಗೆ ಕೇಂದ್ರ ಸರ್ಕಾರವು ತೀರುವಳಿ ನೀಡಬಾರದೆಂದು ಹಾಗೂ ಯೋಜನೆಯನ್ನು ಮುಂದುವರೆಸದಂತೆ ತಮಿಳುನಾಡು ರಾಜ್ಯಕ್ಕೆ ನಿರ್ದೇಶನ ನೀಡುವಂತೆ ಕೋರಲಾಗಿದೆ.<br><br>ಸದರಿ ಯೋಜನೆಯ ಬಗ್ಗೆ ರಾಜ್ಯವು ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ದಿನಾಂಕ:21.02.2021ರಂದು ಜಲ ಸಂಪನ್ಮೂಲ ಸಚಿವರು ನವದೆಹಲಿಯಲ್ಲಿ ಕಾನೂನು ಮತ್ತು ತಾಂತ್ರಿಕ ಪರಿಣಿತರೊಂದಿಗೆ ಹಾಗೂ ದಿನಾಂಕ:26.02.2021ರಂದು ಬೆಂಗಳೂರಿನಲ್ಲಿ ಜಲ ಸಂಪನ್ಮೂಲ ಸಚಿವರು ಹಾಗೂ ಗೃಹ ಮತ್ತು ಕಾನೂನು, ಸಂಸದೀಯ ಮತ್ತು ಶಾಸನಾ ರಚನೆಯ ಇಲಾಖಾ ಸಚಿವರು ಕಾನೂನು ಹಾಗೂ ತಾಂತ್ರಿಕ ತಂಡದೊಂದಿಗೆ ಕೂಲಂಕಷವಾಗಿ ಚರ್ಚಿಸಿರುತ್ತಾರೆ. |

| | | |
|---|---|---|
| | | ತಮಿಳುನಾಡು ರಾಜ್ಯವು ಕಾವೇರಿ ನ್ಯಾಯಾಧಿಕರಣದ ತೀರ್ಪಿನ ಉಲ್ಲಂಘನೆಯಾಗಿ ಕಾವೇರಿ ಕಣಿವೆಯ ಹೆಚ್ಚುವರಿ ನೀರಿನ ಬಳಕೆಗಾಗಿ ಯೋಜಿಸಿರುವ ಕಾವೇರಿ-ವೆಲ್ಲಾರ್ ಯೋಜನೆಯನ್ನು ಕೈಗೊಳ್ಳದಂತೆ ಕ್ರಮವಹಿಸುವ ನಿಟ್ಟಿನಲ್ಲಿ, ರಾಜ್ಯವು ಕಾನೂನಾತ್ಮಕವಾಗಿ ಹಾಗೂ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುವ ಕುರಿತು ಕಾನೂನು ತಂಡದೊಂದಿಗೆ ಸಮಾಲೋಚಿಸುತ್ತಿದ್ದು, ಕಾವೇರಿ ಕಣಿವೆಯಲ್ಲಿನ ರಾಜ್ಯದ ಹಿತಾಸಕ್ತಿಯನ್ನು ಕಾಪಾಡಲು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಜಸಂಇ 11 ಕಾವಿಇ 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ